ದಿನಾಂಕಃ17-11-2015. ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು

ಪಾಟೀ ಸವಾಲುಃ 2ರಿಂದ 4ನೇ ಆರೋಪಿತರ ಪರವಾಗಿ ಶ್ರೀ ಆರ್. ಕೆ. ಎಂ. ವಕೀಲರಿಂದಃ

4. ನಾನು ಅಂಗಡಿಯಲ್ಲಿ ವ್ಯಾಪಾರ ಮಾಡುತ್ತೇನೆ. ಚಾ.ಸಾ.1 ನನ್ನ ಅಕ್ಕ. ಚಾ.ಸಾ.2 ನನ್ನ ಸಹೋದರ. ಚಾ.ಸಾ.1 ದೂರು ಕೊಡಲು ಹೋದಾಗ ನಾನು ಸಹ ಅವರ ಜೊತೆಯಲ್ಲಿ ಇದ್ದೆ. ದೂರು ಕೊಡಲು ಹೋದವರು ಒಂದು ಗಂಟೆ ಕಾಲ ಪೋಲೀಸ್ ಠಾಣೆಯಲ್ಲಿ ಇದ್ದೆವು. ಚಾಸಾ.1 ಯಾವ ರೀತಿ ದೂರು ಕೊಟ್ಟಿದ್ದಾಳೆ ಎಂದು ನಾನು ಗಮನಿಸಿದ್ದೇನೆ. ದೂರನ್ನು ನಾನು ಬರೆದುಕೊಟ್ಟಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆ ದೂರಿನಲ್ಲಿ ಕಳ್ಳತನವಾಗಿರುವ ಬಗ್ಗೆ ಮಾತ್ರ ಹೇಳಿದ್ದು ಯಾವುದೇ ವ್ಯಕ್ತಿಯ ಹೆಸರನ್ನು ತಿಳಿಸಿರುವುದಿಲ್ಲ. ಘಟನಾ ಸ್ಥಳದಲ್ಲಿ 5 ಜನ ಮಾತ್ರ ಇದ್ದೆವು. ನಾವು ಹೋಗುವ ದಿಕ್ಕಿಗೆ ಹೋಗುವ ಜನರು ನಮ್ಮ ಹಿಂದೆ ತುಂಬಾ ಜನ ಇದ್ದರು. ಚಾ.ಸಾ.1ರವರ ಸರವನ್ನು ಕದ್ದವರು ನಮ್ಮ ವಿರೋಧ ದಿಕ್ಕಿಗೆ ಓಡಿ ಹೋಗಿರುತ್ತಾರೆ. ಆಕೆಯ ಚೈನ್‌ನ್ನು ಕೊಂಡುಹೋದ ವ್ಯಕ್ತಿ ನಮ್ಮ ಮುಂದೆ ಇದ್ದ ಜನರನ್ನು ದಾಟಿ ಹೋಗಬೇಕಾಗಿತ್ತು ಎಂದರೆ ಸರಿ. ಘಟನೆ ನಡೆದ ಅರ್ಧ ಒಂದು ಗಂಟೆಯ ಒಳಗೆ ಪ್ರಥಮವಾಗಿ ನಾವು ಪೋಲೀಸರ ಸಂಪರ್ಕಕ್ಕೆ ಬಂದಿರುತ್ತೇವೆ. ಆವಾಗಲೇ ಪೋಲೀಸರಲ್ಲಿ ಘಟನೆಯ ಬಗ್ಗೆ ಹೇಳಿರುತ್ತೇನೆ. ಘಟನೆ ಆಗುವಾಗ ನನಗೆ ಆರೋಪಿ 1ರಿಂದ 3ರವರ ಮುಖ ಪರಿಚಯಮಾತ್ರ ಇತ್ತು. ನಾನು ಪೋಲೀಸರಲ್ಲಿ ಹೇಳಿಕೆ ಕೊಡುವಾಗ ಘಟನೆಯಲ್ಲಿ ಒಬ್ಬ ಮಾತ್ರ ಭಾಗವಹಿಸಿದ್ದ ಬಗ್ಗೆ ಹೇಳಿರುತ್ತೇನೆ. ಆತನ ಚಹರೆಯನ್ನು ನಾನು ಪೋಲೀಸರಿಗೆ ಹೇಳಿರುವುದಿಲ್ಲ. ನ್ಯಾಯಾಲಯದಿಂದ ಚಿನ್ನಾಭರಣಗಳನ್ನು ಚಾ.ಸಾ.1ರವರು ಬಿಡಿಸಿಕೊಂಡ ಹೋದ ನಂತರ ಆಕೆ ಕೋಟೇಶ್ವರದ ಲಕ್ಷ್ಮಿ ಜುವೆಲ್ಲರ್ಸ್‌ನಲ್ಲಿ ರಿಪೇರಿ ಮಾಡಿಸಿದ್ದು ಅದು ಈಗ ರೂಪಾಂತರ ಆಗಿರುತ್ತದೆ ಎಂದರೆ ಸರಿ.

5. ಕಳ್ಳತನ ಆದ ಒಂದು ತಿಂಗಳ ನಂತರ ಆ ಚಿನ್ನಾಭರಣಗಳನ್ನು ಪೋಲೀಸ್ ಠಾಣೆಯಲ್ಲಿ ನೋಡಿದ್ದೆ. ಸದ್ರಿ ಚಿನ್ನಾಭರಣಗಳು ಎಸ್‌ಐರವರ ವಶದಲ್ಲಿ ಇತ್ತು. ಅವರ ವಶಕ್ಕೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ಸ್ಥಳದಲ್ಲಿ ಇದ್ದದ್ದೇ ಇಲ್ಲ ಎಂದರೆ ಸರಿಯಲ್ಲ. ಮು.ಮಾ.1

ಮತ್ತು 2 ಚಾ.ಸಾ.1ರವರಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ನನ್ನ ಅಕ್ಕ ಆಗಿದ್ದ ಕಾರಣ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1ನೇ ಆರೋಪಿತನ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕುಂದಾಪುರ